# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## ಸಿ.ಸಿ. ನಂ. 2216/23

| | | |
|---|---|---|
| ಆರೋಪಿ ಹೆಸರು | – | ಶೇಖ್ ಮೌಲಾ ಅಲಿ ಶೇಖ್ ಅಬ್ದುಲ್ |
| ವಯಸ್ಸು | – | 46 ವರ್ಷ |
| ವೃತ್ತಿ | – | ಕೂಲಿ |
| ವಾಸ್ತವ್ಯ | – | ಮನೆ ನಂ. 9, ಕೊಟ್ಟಾ, ದಾವೋಲಿಂ,<br>ನಾವೆಲಿಂ, ಸಾಲ್ಸೇಟ್, ದಕ್ಷಿಣ ಗೋವಾ– 403 707 |

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿ ಆರೋಪಿತರ ಹೇಳಿಕೆ

ಪ್ರಶ್ನೆಃ 1 – ನ್ಯಾಯಾಲಯದ ಸಮಕ್ಷಮ ಅಭಿಯೋಜಕ ಸಾಕ್ಷಿಗಳು ಸಾಕ್ಷಿ ನುಡಿದಿರುವುದನ್ನು ಕೇಳಿಸಿಕೊಂಡಿರುವಿರಾ?

ಉತ್ತರಃ –

ಪ್ರಶ್ನೆಃ 2 – ಪ್ರಕರಣದ ಸಾಕ್ಷಿ **ಪ್ರಾ.ಸಾ.1– ಆನಂದು ತಿಮ್ಮಾ ಗೌಡ** ಇವರು ತಮ್ಮ ಸಾಕ್ಷ್ಯದಲ್ಲಿ, ನಾವು ದಿನಾಂಕಃ 06–10–2023 ರಂದು ಅಂಕೋಲಾದಿಂದ ಸಂಜೆ 6.00 ಗಂಟೆಗೆ ತನ್ನ ಬೈಕ್‌ನಲ್ಲಿ ಸಿವಿಲ್ ಆಸ್ಪತ್ರೆಗೆ ಬಂದು ತನ್ನ ಪರಿಚಯದವರನ್ನು ನೋಡಿ ವಾಪಸ್ ಸುಮಾರು 8.50 ಗಂಟೆಗೆ ನಾನು ಮತ್ತು ಒಬ್ಬ ಚಿಕ್ಕ ಹುಡುಗ ಒಂದು ಬೈಕ್‌ನಲ್ಲಿ, ಮೃತ ಪ್ರವೀಣ ಈತನು ತನ್ನ ಬೈಕ್ ನಂ. ಕೆಎ–30–ಎಕ್ಸ–0740 ರಲ್ಲಿ ವಾಪಸ್ ಅಂಕೋಲಾಕ್ಕೆ ಹೋಗುತ್ತಿದ್ದಾಗ ಸುಮಾರು 9.00 ಗಂಟೆಗೆ ಬಿಣಗಾದ ಕರಿ ದೇವಸ್ಥಾನದ ಹತ್ತಿರ ರಸ್ತೆಯಲ್ಲಿ ಎದುರುಗಡೆಯಿಂದ ಅಂಕೋಲಾ ಕಡೆಯಿಂದ ಕಾರವಾರ ಕಡೆಗೆ ಒಂದು ಕಾರ್ ನಂ. ಜಿಎ–08–ಎಂ–0220 ನ್ನು ಅದರ ಚಾಲಕ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಲಬದಿಗೆ ಬಂದು ಪ್ರವೀಣ ಇವರು ಚಲಾಯಿಸುತ್ತಿದ್ದ ಬೈಕಿಗೆ ಮುಂದಿನಿಂದ ಡಿಕ್ಕಿಪಡಿಸಿದಾಗ ಮೃತ ಪ್ರವೀಣ ಬೈಕ್ ಸಮೇತ ರಸ್ತೆ ಮೇಲೆ ಬಿದ್ದಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 3 – ಪ್ರಕರಣದ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ತಕ್ಷಣ ನಾವು ನಮ್ಮ ಬೈಕ್ ನಿಲ್ಲಿಸಿ ಪ್ರವೀಣ ಇವರನ್ನು ಎತ್ತಿ ನೋಡಿದಾಗ ಆತನ ಕಾಲಿಗೆ, ಎದೆಭಾಗಕ್ಕೆ ಗಾಯವಾಗಿ ರಕ್ತ ಬರುತ್ತಿತ್ತೆಂದೂ, ಆತ ಮಾತನಾಡುವ ಸ್ಥಿತಿಯಲ್ಲಿ ಹಾಗೂ ಪ್ರಜ್ಞೆಯಲ್ಲಿ ಇರಲಿಲ್ಲವೆಂದೂ, ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆಂದೂ, ಕಾರ್ ಚಾಲಕನ ಹೆಸರು ಶೇಖ್ ಮೌಲಾಲಿ, ಗೋವಾ ಎಂದು ತಿಳಿಯಿತೆಂದೂ, ವೈದ್ಯಾಧಿಕಾರಿಗಳು ಪ್ರವೀಣ ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆಂದು, ಸದರಿ ಅಪಘಾತ ಕಾರ್ ಚಾಲಕನ ತಪ್ಪಿನಿಂದ ಸಂಭವಿಸಿರುತ್ತದೆಂದೂ, ಈ ಬಗ್ಗೆ ಕಾರವಾರ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 4 – ಪ್ರಕರಣದ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದೂರು ಕೊಟ್ಟ ವಾರನೇ ದಿನ ಸುಮಾರು 10.30 ರಿಂದ 11.00 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದು ಚಾ.ಸಾ.2 ಮತ್ತು 3 ರವರ ಸಮಕ್ಷಮ ತಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತಾರೆಂದೂ, ನಕ್ಷೆ ತಯಾರಿಸಿ,ಫೋಟೊ ತೆಗೆದು ತನ್ನ ಸಹಿ ಪಡೆದಿರುತ್ತಾರೆಂದೂ, ಅಪಘಾತಪಡಿಸಿದ ಹಾಗೂ ಅಪಘಾತಕ್ಕೊಳಗಾದ ವಾಹನವನ್ನು ಪೊಲೀಸರು ಪೊಲೀಸ್ ಠಾಣೆಗೆ ಸ್ಥಳಾಂತರಿಸಿರುತ್ತಾರೆಂದು ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 5 – ಪ್ರಕರಣದ ಸಾಕ್ಷಿ **ಫ್ರಾ.ಸಾ. 2– ವಸಂತ ಚಂದ್ರು ಗೌಡ** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕಃ 07–10–2023 ರಂದು ಪೊಲೀಸರು ಬೆಳಿಗ್ಗೆ 11.00 ರಿಂದ 12.00 ಗಂಟೆ ಸಮಯಕ್ಕೆ ಕಾರವಾರ – ಅಂಕೋಲಾ ರಾಷ್ಟ್ರೀಯ ಹೆದ್ದಾರಿಯ ಬಿಣಗಾದ ಕರಿ ದೇವರ ದೇವಸ್ಥಾನದ ಹತ್ತಿರದ ರಸ್ತೆ ಅಪಘಾತದ ಹಿನ್ನಲೆಯಲ್ಲಿ ತನ್ನನ್ನು ಹಾಗೂ ಚಾ.ಸಾ.3 ರವರಿಗೆ ನೋಟಿಸ್ ಜಾರಿ ಮಾಡಿ ಪಂಚನಾಮೆ ಜರುಗಿಸಿರುತ್ತಾರೆಂದೂ, ಕಚ್ಚಾ ನಕಾಶೆ ತಯಾರಿಸಿ, ಫೋಟೊ ತೆಗೆದು ತನ್ನ ಸಹಿ ಪಡೆದಿರುತ್ತಾರೆಂದೂ, ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ಅಪಘಾತಪಡಿಸಿದ ಕಾರ್ ಮತ್ತು ಅಪಘಾತಕ್ಕೀಡಾದ ಬೈಕ್ ಇತ್ತೆಂದು ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 6 – ಪ್ರಕರಣದ ಸಾಕ್ಷಿ **ಫ್ರಾ.ಸಾ. 3–ಯಶವಂತ ತಿಮ್ಮಾ ಗೌಡ** ಇವರು ತಮ್ಮ ಸಾಕ್ಷ್ಯದಲ್ಲಿ, ಅಪಘಾತವಾದ ಹಿನ್ನಲೆಯಲ್ಲಿ ಪೊಲೀಸರು ಜಿಎ–08–ಎಂ–0220 ಕಾರ್ ವಾಹನವನ್ನು

ಪಂಚನಾಮೆ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆಂದೂ, ಸದರಿ ಕಾರಿನ ಮುಂದುಗಡೆಯ ಬಂಪರ್ ಭಾಗ ಹಾಗೂ ಮುಂದುಗಡೆಯ ಇತರ ಭಾಗಗಳಿಗೆ ಜಖಂ ಆಗಿರುತ್ತದೆಂದೂ, ಪಂಚನಾಮೆ ಕಾಲಕ್ಕೆ ಪೊಲೀಸರು ಫೋಟೊ ತೆಗೆದಿರುತ್ತಾರೆಂದೂ, ಸದರಿ ಪಂಚನಾಮೆಗೆ ತಾನು ಸಹಿ ಹಾಕಿರುವುದಾಗಿಯೂ, ಪಂಚನಾಮೆ ಕಾಲಕ್ಕೆ ಅಪಘಾತಕ್ಕೊಳಗಾದ ಬೈಕ್ ಸಹ ಇದ್ದು, ಅದೂ ಸಹ ಜಖಂ ಆಗಿತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆ 7 – ಪ್ರಕರಣದ ಸಾಕ್ಷಿ **ಫ್ರಾ.ಸಾ.4– ನಾಗರಾಜ ತಿಪ್ಪಾ ಗೌಡ** ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 06–10–2023 ರಂದು ರಾತ್ರಿ ಸುಮಾರು 9.00 ಗಂಟೆಗೆ ನಾನು ಚಾ.ಸಾ. 8 ರವರ ಜೊತೆ ಬೈಕ್‌ನಲ್ಲಿ ಕಾರವಾರ – ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರವಾರದಿಂದ ಅಂಕೋಲಾ ಮನೆಗೆ ಹೋಗುತ್ತಿದ್ದಾಗ ಬಿಣಗಾ ಘಟ್ಟದ ಹತ್ತಿರ ಒಬ್ಬ ಕಾರ್ ಚಾಲಕನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಒಮ್ಮೆಲೆ ತಿರುಗಿಸಿ ನೇರವಾಗಿ ಅಂಕೋಲಾ ಕಡೆಯಿಂದ ಕಾರವಾರ ಕಡೆಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿಪಡಿಸಿದ್ದರಿಂದ ಬೈಕ್‌ನವನು ಕೆಳಗಡೆ ಬಿದ್ದಿದ್ದು ಅವನ ತಲೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತೆಂದೂ, ಆತ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು ಮಾತನಾಡುವ ಸ್ಥಿತಿಯಲ್ಲಿಯೂ ಸಹ ಇರಲಿಲ್ಲವೆಂದೂ, ಅಲ್ಲಿದ್ದವರು ಆ್ಯಂಬುಲೆನ್ಸ ತರಿಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆಂದೂ, ಬೈಕ್ ಸವಾರನ ಹೆಸರು ಪ್ರವೀಣ ಆಗಿದ್ದು, ಗೋವಾ ಪಾಸಿಂಗ್ ಕಾರ್ ಆಗಿತ್ತೆಂದೂ, ಅಪಘಾತಕ್ಕೀಡಾದ ವ್ಯಕ್ತಿ ಮೃತಪಟ್ಟಿರುತ್ತಾರೆಂದೂ, ಸದರಿ ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆ 8– ಪ್ರಕರಣದ ಸಾಕ್ಷಿ **ಫ್ರಾ.ಸಾ.5 – ರವಿ ಪಾಟು ನಾಯ್ಕ,** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕಃ 06–10–2023 ರಂದು ರಾತ್ರಿ ಸುಮಾರು 9.00 ಗಂಟೆಗೆ ಚಾ.ಸಾ. 7 ರವರ ಜೊತೆ ಬೈಕ್‌ನಲ್ಲಿ ಕಾರವಾರ – ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರವಾರದಿಂದ ಅಂಕೋಲಾ ಮನೆಗೆ ಹೋಗುತ್ತಿದ್ದಾಗ ಬಿಣಗಾ ಘಟ್ಟದ ಡಿವೈಡರ್ ಹತ್ತಿರ ಒಬ್ಬ ಕಾರ್ ಚಾಲಕನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಒಮ್ಮೆಲೆ ತಿರುಗಿಸಿ ನೇರವಾಗಿ ಅಂಕೋಲಾ ಕಡೆಯಿಂದ ಕಾರವಾರ ಕಡೆಗೆ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿಪಡಿಸಿದಾಗ ಬೈಕನವನು ಕೆಳಗಡೆ ಬಿದ್ದಿದ್ದು ಆತನ ತಲೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತೆಂದೂ, ಆತ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದು ಮಾತನಾಡುವ ಸ್ಥಿತಿಯಲ್ಲಿ

ಇರಲಿಲ್ಲವೆಂದೂ, ಅಲ್ಲಿದ್ದವರು ಆ್ಯಂಬುಲೆನ್ಸ ತರಿಸಿ ಆಸ್ಪತ್ರೆಗೆ ಕಳುಹಿಸಿ ಕೊಟ್ಟಿರುತ್ತಾರೆಂದೂ, ಸದರಿ ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 9 – ಪ್ರಕರಣದ ಸಾಕ್ಷಿ **ಪ್ರಾ.ಸಾ. 6– ನಾಗರಾಜ ವಾಸು ಗೌಡ** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕಃ 06–10–2023 ರಂದು ತಾನು ಅಮದಳ್ಳಿಗೆ ಹೋಗಿ ರಾತ್ರಿ ಸುಮಾರು 8.30 ಗಂಟೆಗೆ ಅಮದಳ್ಳಿಯಿಂದ ಕಾರವಾರ ಕಡೆಗೆ ಹೋಗುತ್ತಿದ್ದಾಗ ಕರಿದೇವಸ್ಥಾನದ ಹತ್ತಿರ ಅಂಕೋಲಾ ಕಡೆಯಿಂದ ಕಾರವಾರ ಕಡೆಗೆ ಬರುತ್ತಿದ್ದ ಒಬ್ಬ ಕಾರ್ ಚಾಲಕನು ಕಾರವಾರ ಕಡೆಯಿಂದ ಅಂಕೋಲಾ ಕಡೆಗೆ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿಪಡಿಸಿದ್ದರಿಂದ ಆತನ ತಲೆಗೆ ಪೆಟ್ಟಾಗಿ ಆತನ ಪ್ರಜ್ಞೆ ತಪ್ಪಿದ್ದು, ಆತ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲವೆಂದೂ, ಆತನ ಹೆಸರು ಪ್ರವೀಣ ಹಾಗೂ ಕಾರ್ ಚಾಲಕನ ಹೆಸರು ಶೇಖ್ ಮೌಲಾಲಿ ಎಂದು ಗೊತ್ತಾಗಿರುತ್ತದೆಂದೂ, ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 10 – ಪ್ರಕರಣದ ಸಾಕ್ಷಿ **ಪ್ರಾ.ಸಾ.7– ಸಂತೋಷ ರಾಮಾ ಗೌಡ** ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 06–10–2023 ರಂದು ರಾತ್ರಿ 8.30 ಗಂಟೆಗೆ ತಾನು ತನ್ನ ಸ್ನೇಹಿತ ಚಾ.ಸಾ. 9 ರವರು ಅಮದಳ್ಳಿಯಲ್ಲಿ ಪುರುಷೋತ್ತಮ ಇವರ ಹುಟ್ಟುಹಬ್ಬವನ್ನು ಮುಗಿಸಿಕೊಂಡು ವಾಪಸ್ ಅಮದಳ್ಳಿಯಿಂದ ಕಾರವಾರ ಕಡೆಗೆ ಬೈಕ್‌ನಲ್ಲಿ ಅಂಕೋಲಾ – ಕಾರವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುತ್ತಿರುವಾಗ ಕಾರವಾರ ಕಡೆಯಿಂದ ಅಂಕೋಲಾ ಕಡೆಗೆ ಕರಿಘಟ್ಟದ ಹತ್ತಿರ ಜಿಎ–08–0220 ಕಾರನ್ನು ಅದರ ಚಾಲಕ ಚಲಾಯಿಸಿಕೊಂಡು ಬಂದು ಅಂಕೋಲಾ ಕಡೆಯಿಂದ ಕಾರವಾರ ಕಡೆಗೆ ಹೋಗುತ್ತಿದ್ದ ಬೈಕ್ ಸವಾರನಿಗೆ ಡಿಕ್ಕಿಪಡಿಸಿದ್ದರಿಂದ ಬೈಕ್ ಸವಾರನು ಕೆಳಗೆ ಬಿದ್ದು ಮೃತಪಟ್ಟಿರುತ್ತಾನೆಂದೂ, ಬೈಕ್ ಸವಾರನ ತಲೆಗೆ ಮತ್ತು ಕೈಗೆ ಪೆಟ್ಟಾಗಿದ್ದು ಆತ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲವೆಂದೂ, ಸದರಿ ಅಪಘಾತ ಕಾರ್ ಚಾಲಕನ ತಪ್ಪಿನಿಂದ ಆಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆ: 11 – ಪ್ರಕರಣದ ಸಾಕ್ಷಿ **ಪ್ರಾ.ಸಾ.–8 ಮುಕ್ತಾರ್ ಸಯ್ಯದ್ ಅಜಂ** ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 06–10–2023 ರಂದು ತಾನು, ಆರೋಪಿಯಾದ ನೀವು ಹಾಗೂ ತನ್ನ ಮಗಳಾದ ಚಾ.ಸಾ. 13 ಮದುವೆ ಕಾರ್ಯಕ್ರಮದ ನಿಮಿತ್ತ ಕರೆಯೋಲೆ ನೀಡಲು ಯಲ್ಲಾಪುರಕ್ಕೆ 1 ನೇ ಆರೋಪಿಯಾದ ನಿಮಗೆ ಸೇರಿದ ನೀವು ಚಲಾಯಿಸುತ್ತಿರುವ ಕಾರಿನಲ್ಲಿ ಅಂಕೋಲಾ ಮಾರ್ಗವಾಗಿ ಮಡಗಾಂವ ಕಡೆಗೆ ಹೋಗುತ್ತಿದ್ದಾಗ ಘಟ್ಟದ ಹತ್ತಿರ ತಿರುವಿನಲ್ಲಿ ಮೃತ ಪ್ರವೀಣ ಇವರು ಬೈಕ್ ಸ್ಕಿಡ್ಡಾಗಿ ಬಿದ್ದರೆಂದೂ, ಅಲ್ಲಿದ್ದವರು ಉಪಚರಿಸಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆ: 12 – ಪ್ರಕರಣದ ಸಾಕ್ಷಿ **ಪ್ರಾ.ಸಾ.9 – ರಾಬಿಯಾ ಮೌಲಾಲಿ ಶೇಖ್** ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ತನ್ನ ತಂದೆಯಾಗಿದ್ದು, ದಿನಾಂಕ 06–10–2023 ರಂದು ಆರ್ಟಿಗಾ ಕಾರನಲ್ಲಿ ಯಲ್ಲಾಪುರದಿಂದ ಮಡಗಾಂವ್‌ಗೆ ತಾನು, ತನ್ನ ತಂದೆಯಾದ ಆರೋಪಿ ಮತ್ತು ಚಾ.ಸಾ.12 ರವರು ಸೇರಿ ಹೋಗುತ್ತಿದ್ದಾಗ ಸ್ಕೂಟಿ ಚಾಲಕನು ಬಂದು ಕಾರಿಗೆ ಡಿಕ್ಕಿಪಡಿಸಿ ಕೆಳಗಡೆ ಬಿದ್ದಿದ್ದನೆಂದೂ, ಸದರಿ ಅಪಘಾತವನ್ನು ತಾನು ನೋಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆ: 13 – ಪ್ರಕರಣದ ಸಾಕ್ಷಿ **ಪ್ರಾ.ಸಾ. 11– ಸುನೀಲ್ ದೇವಯ್ಯ, ಸಿ.ಪಿ.ಸಿ.–894** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ಕಳೆದ 4 ವರ್ಷಗಳಿಂದ ಕಾರವಾರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದು, ತನಿಖಾಧಿಕಾರಿಯವರ ಮೌಖಿಕ ಆದೇಶದಂತೆ ದಿನಾಂಕಃ 07–10–2023 ರಂದು ಸ್ಥಳ ಪಂಚನಾಮೆ, ಶವ ಪಂಚನಾಮೆ ಹಾಗೂ ವಾಹನ ತಡೆಹಿಡಿದ ಪಂಚನಾಮೆ ಕಾಲಕ್ಕೆ ತಮ್ಮ ಇಲಾಖೆಯವರು ಪೂರೈಸಿದ ಯುನಿಕ್ಸ ಕ್ಯಾಮರಾದಿಂದ ಛಾಯಾಚಿತ್ರ ತೆಗೆದು ಅದನ್ನು ಪ್ರಿಂಟ್ ಹಾಕಿದ ಬಗ್ಗೆ ಕಲಂ 65(ಬಿ) ಪ್ರಮಾಣಪತ್ರ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆ: 14 – ಪ್ರಕರಣದ ಸಾಕ್ಷಿ **ಪ್ರಾ.ಸಾ.–12– ಶಿವಪ್ರಸಾದ ಪ್ರಕಾಶ ಪಾಟೀಲ್, ಸಿ.ಎಚ್.ಸಿ.–1326** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ಕಳೆದ 6 ವರ್ಷಗಳಿಂದ ಕಾರವಾರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದು, ಚಾ.ಸಾ. 25 ರವರ ನಿರ್ದೇಶನದಂತೆ ದಿನಾಂಕಃ

07-10-2023 ರಂದು ಬೆಳಿಗ್ಗೆ 8.15 ರಿಂದ 9.30 ಗಂಟೆಗೆ ಠಾಣಾ ಆವರಣದಲ್ಲಿ ವಾಹನ ಜಪ್ತು ಪಂಚನಾಮೆಯನ್ನು ತನ್ನ ಹಸ್ತಾಕ್ಷರದಲ್ಲಿ ಬರೆದು ದಸ್ತೂರ ಸಹಿ ಹಾಕಿರುವುದಾಗಿಯೂ, ಅದೇ ದಿನ 9.40 ರಿಂದ 10.40 ಗಂಟೆಯವರೆಗೆ ಜಿಲ್ಲಾ ಆಸ್ಪತ್ರೆಯಲ್ಲಿ ಶವ ಪಂಚನಾಮೆಯನ್ನು ಬರೆದು ದಸ್ತೂರ ಆಗಿ ಸಹಿ ಹಾಕಿರುವುದಾಗಿಯೂ, ಅದೇ ದಿನ 11.00 ರಿಂದ 12.30 ಗಂಟೆಯವರೆಗೆ ಅಪಘಾತ ಸ್ಥಳದಲ್ಲಿ ಹಾಜರಿದ್ದು ಶವ ಪಂಚನಾಮೆಯನ್ನು ಬರೆದು ದಸ್ತೂರ ಆಗಿ ಸಹಿ ಹಾಕಿರುವುದಾಗಿಯೂ, ಕಚ್ಚಾ ನಕಾಶೆಯನ್ನು ತಯಾರಿಸಿರುವುದಾಗಿಯೂ ಹಾಗೂ ಚಾ.ಸಾ. 25 ರವರ ನಿರ್ದೇಶನದಂತೆ ಅಪಘಾತ ಸ್ಥಳದಲ್ಲಿದ್ದ ವಾಹನಗಳನ್ನು ಸಂಚಾರಕ್ಕೆ ಅಡೆತಡೆಯಾಗದಂತೆ ಪೊಲೀಸ್ ಠಾಣಾ ಆವರಣಕ್ಕೆ ಸ್ಥಳಾಂತರಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 15 – ಪ್ರಕರಣದ ಸಾಕ್ಷಿ **ಫ್ರಾ.ಸಾ.–13– ರವಿ ಭೀಮಸೇನ್‌ರಾವ್ ಬಿಸರಳ್ಳಿ, ಹಿರಿಯ ಮೋಟಾರು ವಾಹನ ನಿರೀಕ್ಷಕರು,** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ಕಳೆದ 9 ವರ್ಷಗಳಿಂದ ಕಾರವಾರದಲ್ಲಿ ಹಿರಿಯ ಮೋಟಾರು ವಾಹನ ನಿರೀಕ್ಷಕನಾಗಿ ಕರ್ತವ್ಯನಿರ್ವಹಿಸುತ್ತಿದ್ದು, ಮೋಟಾರು ವಾಹನ ಪರಿಶೀಲಿಸುವ ಬಗ್ಗೆ 3 ವರ್ಷ ಕೋರ್ಸ ಮತ್ತು 1 ವರ್ಷ ತರಬೇತಿಯನ್ನು ಪಡೆದಿರುವುದಾಗಿಯೂ, ತನ್ನ ಸೇವಾ ಅವಧಿಯಲ್ಲಿ ಸುಮಾರು 2 ರಿಂದ 3 ಸಾವಿರ ಮೋಟಾರು ವಾಹನ ಪರೀಲಿಸಿದ ಬಗ್ಗೆ ಅಭಿಪ್ರಾಯ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 16 – ಪ್ರಕರಣದ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10-10-2023 ರಂದು ಕಾರವಾರ ಸಂಚಾರಿ ಪೊಲೀಸ್ ಠಾಣೆಯಿಂದ ಅಪಘಾತಕ್ಕೀಡಾದ ಮತ್ತು ಅಪಘಾತಪಡಿಸಿದ ವಾಹನಗಳ ತಪಾಸಣೆ ಮಾಡಿ ವರದಿ ನೀಡುವ ಕುರಿತು ಮನವಿ ಬಂದಿರುತ್ತದೆಂದೂ, ತಾನು ಅದೇ ದಿನ ಮಧ್ಯಾಹ್ನ 3.25 ಗಂಟೆಗೆ ಭೇಟಿ ನೀಡಿ ಠಾಣಾ ಆವರಣದಲ್ಲಿ ನಿಲ್ಲಿಸಿಟ್ಟ ಅಪಘಾತಪಡಿಸಿದ ವಾಹನ ನಂ. ಜಿಎ-08-0220 ಮಾರುತಿ ಸುಜುಕಿ ಮೋಟಾರು ಕಾರನ್ನು ಪರಿಶೀಲಿಸಿದಾಗ ಅದರ ಮುಂದಿನ ಮತ್ತು ಹಿಂದಿನ ಬಲಭಾಗದ 2 ಟಯರಗಳು ಒಡೆದಿರುತ್ತವೆಂದೂ, ಮುಂದಿನ ಬಂಪರ್ ಎಡಭಾಗದಲ್ಲಿ ಒಡೆದಿತ್ತೆಂದೂ, ಎಡಭಾಗದ ಮುಂದಿನ ಮಾಡ್‌ಗಾರ್ಡ ಒಡೆದಿತ್ತೆಂದೂ, ರೆಡಿಯೇಟರ್ ಹಾಳಾಗಿತ್ತೆಂದೂ, ಮುಂದಿನ ನಂಬರ್ ಪ್ಲೇಟ್ ಬೆಂಡಾಗಿತ್ತೆಂದೂ, ರೆಡಿಯೇಟರ್ ಗ್ರಿಲ್ ಒಡೆದಿತ್ತೆಂದೂ, ಎಡಬದಿಯ ಪಾಗ್‌ಲೆನ್ ಒಡೆದಿತ್ತೆಂದೂ, ಎಡಬದಿಯ ಮುಂದಿನ ಕಡೆ ನೆಗ್ಗಿದ ಹಾಗೂ ತಿಕ್ಕಿದ ಗುರುತು ಇತ್ತೆಂದೂ, ವಾಹನ ಚಲಾಯಿಸಿ ನೋಡಿದಾಗ

ಚಲಾಯಿಸುವ ಸ್ಥಿತಿಯಲ್ಲಿ ಇರಲಲ್ಲವೆಂದೂ, ಬ್ರೇಕ್ ಸುಸ್ಥಿತಿಯಲ್ಲಿತ್ತೆಂದೂ, ಯಾವುದೇ ತಾಂತ್ರಿಕ ದೋಷದಿಂದ ಅಪಘಾತ ಆಗಿರಲಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 17 – ಪ್ರಕರಣದ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷದಲ್ಲಿ ಇನ್ನೊಂದು ಅಪಘಾತಕ್ಕೀಡಾದ ವಾಹನ ಮೋಟಾರ್ ಸೈಕಲ್ ನಂ. ಕೆಎ–30–ಎಕ್ಸ–0740 ವಾಹನವನ್ನು ಪರಿಶೀಲಿಸಿದಾಗ ಅದರ ಹಿಂದಿನ ನಂಬರ್ ಪ್ಲೇಟ್ ಬೆಂಡಾಗಿತ್ತೆಂದೂ, ಹಿಂದಿ ಮಡ್‌ಗಾರ್ಡ ಒಡೆದಿತ್ತೆಂದೂ, ಗಾರ್ಡ ತುಂಬಾಗಿತ್ತೆಂದೂ, ಕ್ಲಚ್ ಲಿವರ್ ಬೆಂಡಾಗಿತ್ತೆಂದೂ, ಎಡಬದಿಯ ಮುಂದಿನ ಪುಟರೆಸ್ಟ ಬೆಂಡಾಗಿತ್ತೆಂದೂ, ಎಡಬದಿಯ ಹ್ಯಾಂಡಲ್ ಬೆಂಡಾಗಿತ್ತೆಂದೂ, ಎಡಬದಿಯ ಬಾಡಿ ತಿಕ್ಕಿತ್ತೆಂದೂ, ಎಡಬದಿಯ ಹೆಡ್ ಲೈಟ್ ಮತ್ತು ಡೂಮ್ ತಿಕ್ಕಿತ್ತೆಂದೂ, ವಾಹನ ಚಲಾಯಿಸಿ ನೋಡಿದಾಗ ಚಲಾಯಿಸುವ ಸ್ಥಿತಿಯಲ್ಲಿ ಇರಲಲ್ಲವೆಂದೂ, ಬ್ರೇಕ್ ಸುಸ್ಥಿತಿಯಲ್ಲಿತ್ತೆಂದೂ, ಯಾವುದೇ ತಾಂತ್ರಿಕ ದೋಷದಿಂದ ಅಪಘಾತ ಆಗಿರಲಿಲ್ಲವೆಂದೂ, ಕಾರ್ ವಾಹನ ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆದರೆ ಈ ರೀತಿಯ ಜಖಂಗಳು ಆಗುವ ಸಾಧ್ಯತೆ ಇದೆ ಎಂತಲೂ, ಈ ಬಗ್ಗೆ ಪರೀಕ್ಷಾ ವರದಿ ನೀಡಿರುವುದಾಗಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 18 – ಪ್ರಕರಣದ ಸಾಕ್ಷಿ **ಪ್ರಾ.ಸಾ.–14– ಅಮರ ಎಂ., ದೇವರಾಜ್, ಇಂಜನೀಯರ್** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ಕಳೆದ 4 ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಲ್ಲಿ ಸೈಟ್ ಇಂಜನೀಯರ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದು, ದಿನಾಂಕಃ 17–11–2023 ರಂದು ಆರ್.ಟಿ.ಓ., ಪೊಲೀಸರು ಮತ್ತು ತಾವು ಸೇರಿ ಜಂಟಿ ತನಿಖೆ ಮಾಡಲು ತನಿಖಾಧಿಕಾರಿಯವರಿಂದ ಮನವಿ ಪತ್ರ ಬಂದಿರುತ್ತದೆಂದೂ, ರಾಷ್ಟ್ರೀಯ ಹೆದ್ದಾರಿ ಬಿಣಗಾ ಘಾಟ್‌ನ 110.050 RHS ಚೈನೇಜ್‌ನಲ್ಲಿ ಆರ್.ಟಿ.ಓ. ಮತ್ತು ಪಿ.ಎಸ್.ಐ. ಹಾಜರಿದ್ದು, ಪರಿಶೀಲಿಸಲಾಗಿ ಅಲ್ಲಿ ಘಾಟ್ ಸೆಕ್ಷನ್ ಇದ್ದು ರಸ್ತೆ ತಿರುವು ಇತ್ತೆಂದೂ, ಅಲ್ಲಿ ಒಂದು ಡೈವರಶನ್ ಇತ್ತೆಂದೂ, ಡೈವರಶನ್ ಇದ್ದ ಸೈನ್ ಬೋರ್ಡಗಳನ್ನು ಅಳವಡಿಸಲಾಗಿತ್ತೆಂದೂ, ಸದರಿ ರಸ್ತೆ ಚಲಾವಣೆಗೆ ಯೋಗ್ಯ ಇದ್ದು ಸಂಪೂರ್ಣ ಪೂರ್ಣಗೊಂಡ ರಸ್ತೆಯಾಗಿತ್ತೆಂದೂ, ಈ ಬಗ್ಗೆ ತನಿಖಾಧಿಕಾರಿಯವರಿಗೆ ವರದಿ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 19– ಪ್ರಕರಣದ ಸಾಕ್ಷಿ **ಪ್ರಾ.ಸಾ. 15– ದೇವೇಂದ್ರ ಮುನಿಯಾ ನಾಯ್ಕ, ಪಿ.ಎಸ್.ಐ.** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ಕಳೆದ ಒಂದುವರೆ ವರ್ಷಗಳಿಂದ ಕಾರವಾರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯನಿರ್ವಹಿಸುತ್ತಿದ್ದು, ದಿನಾಂಕಃ 06–10–2023 ರಂದು ಠಾಣಾ ಪ್ರಭಾರದಲ್ಲಿದ್ದಾಗ ರಾಷ್ಟ್ರೀಯ ಹೆದ್ದಾರಿ –66 ರ ಬಿಣಗಾ ಕರಿದೇವ ಬೆಟ್ಟದ ಹತ್ತಿರ ಅಪಘಾತವಾಗಿರುವ ಬಗ್ಗೆ ಮಾಹಿತಿ ಬಂದಿದ್ದು ಕೂಡಲೇ ತಾನು ಸ್ಥಳಕ್ಕೆ ಹೋಗಿ ಅಪಘಾತಕ್ಕೀಡಾದ ವ್ಯಕ್ತಿಯನ್ನು ಆಸ್ಪತ್ರೆಗೆ ಕಳುಹಿಸಿರುತ್ತೇನೆಂದೂ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ವಾಹನಗಳನ್ನು ಅಪಘಾತ ಸ್ಥಳದಿಂದ ತೆರವುಗೊಳಿಸಿ ಠಾಣೆಗೆ ತಂದು ಇರಿಸಿರುತ್ತೇನೆಂದೂ, ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು, ಗುನ್ನಾ ನಂ. 69/23 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ. ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 20 – ಪ್ರಕರಣದ ಸಾಕ್ಷಿ **ಪ್ರಾ.ಸಾ. –16– ರಮೇಶ ಶಂಕರ ಹೂಗಾರ, ಪಿ.ಐ.,** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ದಿನಾಂಕಃ 04–01–2023 ರಿಂದ ಕಾರವಾರ ಸಂಚಾರಿ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯನಿರ್ವಹಿಸಿದ್ದು, ಪ್ರಕರಣದ ತನಿಖೆಯನ್ನು ಮುಂದುವರಿಸಿ ಚಾ.ಸಾ.4 ಮತ್ತು 5 ರವರಿಗೆ ಅಪಘಾತಕ್ಕೊಳಗಾದ ವಾಹನಗಳ ತಡೆಹಿಡಿಯುವ ಪಂಚನಾಮೆಗೆ ನೋಟಿಸ್ ಜಾರಿ ಮಾಡಿ, 8.15 ರಿಂದ 9.30 ಗಂಟೆಯವರೆಗೆ ಪಂಚನಾಮೆ ಜರುಗಿಸಿರುತ್ತೇನೆಂದೂ, ಪಂಚನಾಮೆ ಕಾಲಕ್ಕೆ ಭಾವಚಿತ್ರ ತೆಗೆದಿರುತ್ತೇನೆಂದೂ, ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಮೃತರ ಶವ ತನಿಖೆ ಮಾಡಿರುತ್ತೇನೆಂದೂ, ಚಾ.ಸಾ.19 ರವರಿಗೆ ಮೃತದೇಹ ಬಿಟ್ಟುಕೊಟ್ಟು ಅವರಿಂದ ಹೇಳಿಕೆ ಪಡೆದುಕೊಂಡಿರುತ್ತೇನೆಂದೂ, ಚಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಜರುಗಿಸಿ, ಕಚ್ಚಾ ನಕಾಶೆ ತಯಾರಿಸಿ, ಭಾವಚಿತ್ರ ತೆಗೆದಿರುತ್ತೇನೆಂದೂ, ಚಾ.ಸಾ.7 ರಿಂದ 17 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ –

ಪ್ರಶ್ನೆಃ 21 – ಪ್ರಕರಣದ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಚಾ.ಸಾ.17 ರವರಿಂದ ಘಟನಾ ಸ್ಥಳದ ಪೋಟೊ ತೆಗೆದ ಬಗ್ಗೆ ಪ್ರಮಾಣಪತ್ರ ಪಡೆದುಕೊಂಡಿರುತ್ತೇನೆಂದೂ, ಚಾ.ಸಾ.18 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆಂದೂ, ಆರ್.ಟಿ.ಓ. ಮಾರ್ಗೋವಾ

ಇವರಿಂದ ಕಾರಿನ 'B' extract ಕೋರಿ ಮನವಿ ಸಲ್ಲಿಸಿ, ದಿನಾಂಕಃ 09-10-2023 ರಂದು 'B' extract ಪಡೆದುಕೊಂಡಿರುತ್ತೇನೆಂದೂ, ಆರ್.ಟಿ.ಓ. ಕಾರವಾರ ಇವರಿಂದ ಮೋಟಾರ್ ಸೈಕಲ್‌ನ 'B' extract ಕೋರಿ ಮನವಿ ಸಲ್ಲಿಸಿ, ದಿನಾಂಕಃ 09-10-2023 ರಂದು 'B' extract ಪಡೆದುಕೊಂಡಿರುತ್ತೇನೆಂದೂ, NHAI ಅಧಿಕಾರಿಗಳು ಹಾಗೂ IRB ಅಧಿಕಾರಿಗಳಿಗೆ ಅಪಘಾತ ಸ್ಥಳ ಸಂಚಾರಕ್ಕೆ ನಿರ್ಬಂಧಿಸಿದ ಬಗ್ಗೆ ಮಾಹಿತಿ ಕೋರಿ ದಾಖಲಾತಿ ಕೋರಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ -

ಪ್ರಶ್ನೆ: 22 - ಪ್ರಕರಣದ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಕಾರಿನ ಮಾಲಿಕರು ಹಾಗೂ ಮೋಟಾರ್ ಸೈಕಲ್ ಮಾಲಿಕರಿಗೆ ಕಲಂ 133 ನೋಟಿಸ್ ಜಾರಿ ಮಾಡಿರುತ್ತೇನೆಂದೂ, 1 ನೇ ಆರೋಪಿಯಾದ ನಿಮಗೆ ಕಲಂ 41(ಎ) ಅಡಿಯಲ್ಲಿ ನೋಟಿಸ್ ನೀಡಿರುತ್ತೇನೆಂದೂ, ದಿನಾಂಕಃ 10-10-2023 ರಂದು 1 ನೇ ಆರೋಪಿಯಾದ ನೀವು ಠಾಣೆಗೆ ಹಾಜರಾಗಿ ಕಲಂ 133 ನೋಟಿಸ್‌ಗೆ ಉತ್ತರ ನೀಡಿರುತ್ತೀರೆಂದೂ ಹಾಗೂ ನಿಮ್ಮನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆಂದೂ, ಆರ್.ಟಿ.ಓ., ಕಾರವಾರ ಇವರಿಗೆ ವಾಹನದ ತಾಂತ್ರಿಕ ಪರೀಕ್ಷೆ ಮಾಡುವಂತೆ ಮನವಿ ಪತ್ರ ಸಲ್ಲಿಸಿ ಅವರಿಂದ ಪ್ರತ್ಯೇಕವಾಗಿ ಐ.ಎಂ.ವಿ. ವರದಿ ಹಾಗೂ ತಾತ್ಕಾಲಿಕ ವರದಿ ಸ್ವೀಕರಿಸಿಕೊಂಡಿರುತ್ತೇನೆಂದೂ, 1 ನೇ ಆರೋಪಿಯಾದ ನಿಮ್ಮಿಂದ ಇಂಡೆಮನಿಟಿ ಬಾಂಡ್ ಪಡೆದು ವಾಹನ ಬಿಟ್ಟುಕೊಟ್ಟಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ -

ಪ್ರಶ್ನೆ: 23 - ಪ್ರಕರಣದ ಇದೇ ಸಾಕ್ಷಿದಾರರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 16-10-2023 ರಂದು ಪ್ರೊಜೆಕ್ಟ ಮ್ಯಾನೇಜರ್, ಐ.ಆರ್.ಬಿ. ಇವರಿಗೆ 4 ರಸ್ತೆಯಲ್ಲಿ ಒಂದು ರಸ್ತೆ ಬಂದ್ ಮಾಡಿ ಕೋರಿ ಪತ್ರ ಸಲ್ಲಿಸಿರುತ್ತೇನೆಂದೂ, ಚಾ.ಸಾ.23 ರವರಿಂದ ಉತ್ತರ ಪಡೆದುಕೊಂಡಿರುತ್ತೇನೆಂದೂ, ದಿನಾಂಕ 18-10-2023 ರಂದು ಚಾ.ಸಾ.23 ರವರಿಂದ ಇನ್ನೊಂದು ವರದಿ ಮತ್ತು ದಾಖಲಾತಿ ಪಡೆದುಕೊಂಡಿರುತ್ತೇನೆಂದೂ, ದಿನಾಂಕ 20-10-2023 ರಂದು ಐ.ಎಂ.ವಿ. ವರದಿ ಸ್ವೀಕರಿಸಿಕೊಂಡಿರುತ್ತೇನೆಂದೂ, ದಿನಾಂಕಃ 06-11-2023 ರಂದು ಕಲಂ 133 ನೋಟಿಸ್‌ಗೆ ಆರೋಪಿಯಾದ ನೀವು ನೀಡಿದ ಉತ್ತರ ಸ್ವೀಕರಿಸಿಕೊಂಡಿರುತ್ತೇನೆಂದೂ, 2 ನೇ ಆರೋಪಿಯಾದ ನಿಮಗೆ 41 ಎ ಅಡಿಯಲ್ಲಿ

ನೋಟಿಸ್ ನೀಡಿರುತ್ತೇನೆಂದೂ, 2 ನೇ ಆರೋಪಿಯಾದ ನಿಮ್ಮಿಂದ ಇಂಡೆಮನಿಟಿ ಬಾಂಡ್ ಪಡೆದು ವಾಹನ ಬಿಡುಗಡೆ ಮಾಡಿರುತ್ತೇನೆಂದೂ, ಚಾ.ಸಾ.23 ರವರ ಹೇಳಿಕೆ ಪಡೆದುಕೊಂಡಿರುತ್ತೇನೆಂದೂ, ದಿನಾಂಕಃ 02-12-2023 ರಂದು ಪಿ.ಎಂ. ವರದಿ ಪಡೆದುಕೊಂಡಿರುತ್ತೇನೆಂದೂ, ಆರೋಪಿತರಾದ ನಿಮ್ಮ ವಿರುದ್ಧ ಸಾಕ್ಷಿ ಲಭಿಸಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ -

ಪ್ರಶ್ನೆಃ 24 - ಪ್ರಕರಣದ ಸಾಕ್ಷಿ **ಪ್ರಾ.ಸಾ. -17 - ರಾಘವೇಂದ್ರ ಮಂಜುನಾಥ ನಾಯ್ಕು, ಎಕೌಂಟೆಂಟ್** ಇವರು ತಮ್ಮ ಸಾಕ್ಷ್ಯದಲ್ಲಿ, ತಾನು ಸಮಾರು 9 ವರ್ಷಗಳಿಂದ ಐ.ಆರ್.ಬಿ.ಯಲ್ಲಿ ಸೀನಿಯರ್ ಎಕೌಂಟೆಂಟ್ ಆಗಿ ಕರ್ತವ್ಯನಿರ್ವಹಿಸುತ್ತಿದ್ದು, ದಿನಾಂಕಃ 07-10-2023 ರಂದು ಕಾರವಾರ ಸಂಚಾರಿ ಪೊಲೀಸರು ರಾಷ್ಟ್ರೀಯ ಹೆದ್ದಾರಿ -66 ರಲ್ಲಿ 109.700 ಚೆನೇಜ್ ರಸ್ತೆ ನಿರ್ಬಂಧಿಸಿದ ಬಗ್ಗೆ ಮಾಹಿತಿ ಕೋರಿರುತ್ತಾರೆಂದೂ, ದಿನಾಂಕಃ 11-10-2023 ರಂದು ಹಾಗೂ ದಿನಾಂಕಃ 17-10-2023 ರಂದು ದಾಖಲಾತಿಗಳನ್ನು ಪೂರೈಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

ಉತ್ತರಃ -

ಪ್ರಶ್ನೆಃ 25 - ನೀವು ಏನಾದರೂ ಹೇಳುವಿರಾ ?

ಉತ್ತರ -

ಪ್ರಶ್ನೆಃ 26- ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರ -

(ಸಾಕ್ಷಿಗೆ ಕನ್ನಡ ಭಾಷೆಯಲ್ಲಿ ಮೇಲಿನ ಪ್ರಶ್ನೆಗಳನ್ನು ಕೇಳಲಾಗಿ ಅವರು ನೀಡಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ.)

ಕಾರವಾರ

ದಿನಾಂಕಃ 06-01-2025 ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.

ಕಾರವಾರ